# ಕನ್ನಡ ವಿಶ್ವವಿದ್ಯಾಲಯ,ಹಂಪಿ

ವಿದ್ಯಾರಣ್ಯ-೫೮೩ ೨೭೬

## ಜುಲೈ ೨೮, ೨೦೧೭ರ ಶುಕ್ರವಾರದಂದು ನಡೆದ ವಿಶೇಷ ಕಾರ್ಯಕಾರಿ ಸಮಿತಿಯ ೧೮೮ನೇ ಸಭೆಯ ನಡೆವಳಿಗಳು

ಸಭೆಯಲ್ಲಿ ಉಪಸ್ಥಿತರಿದ್ದವರು:

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು | : ಸದಸ್ಯರು |
| ೦೫. ಡಾ. ಎ. ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೬. ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೭. ಡಾ. ಅಶೋಕಕುಮಾರ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೮. ಡಾ. ಸಿ.ಮಹಾದೇವ, ಡೀನ್, ವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೯. ಡಾ. ಸಿದ್ಧಗಂಗಮ್ಮ, ಹಣಕಾಸು ಅಧಿಕಾರಿಗಳು, ಕ.ವಿ.ಹಂ. | : ವಿಶೇಷ ಆಹ್ವಾನಿತರು |
| ೧೦. ಡಾ. ಡಿ. ಪಾಂಡುರಂಗಬಾಬು, ಕುಲಸಚಿವರು, ಕ.ವಿ.ಹಂ. | : ಪದನಿಮಿತ್ತ ಕಾರ್ಯದರ್ಶಿ |

ಸಭೆಯಲ್ಲಿ ಅನುಪಸ್ಥಿತರಿದ್ದವರು:

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ನಿರ್ದೇಶಕರು, ರಾಜ್ಯ ಪುರಾತತ್ವ ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

ಮೊದಲಿಗೆ ನಿಧನರಾದ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವ ಪದವಿ ಪುರಸ್ಕೃತ ಖ್ಯಾತ ವಿಜ್ಞಾನಿ ಪ್ರೊ.ಯು.ಆರ್.ರಾವ್ ಮತ್ತು ಕರ್ನಾಟಕ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಧರ್ಮಸಿಂಗ್ ಅವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ದಿನಾಂಕ ೧೮.೦೪.೨೦೧೭ ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೭ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.

ನಿರ್ಣಯ: ಮಂಡಿಸಲಾದ ನಡೆವಳಿಗಳನ್ನು ಪರಿಶೀಲಿಸಿ ನಿರ್ಣಯಗಳನ್ನು ಅನುಮೋದಿಸಲಾಯಿತು.

**ದಿನಾಂಕ ೧೮.೦೪.೨೦೧೭ ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೭ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.**

ನಿರ್ಣಯ: ೧೮.೦೪.೨೦೧೭ ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯಗಳಲ್ಲಿ ಕ್ರ.ಸಂ.೧೮೭.೦೭, ಕ್ರ.ಸಂ.೧೮೭.೧೭, ಕ್ರ.ಸಂ.೧೮೭.೧೮, ಕ್ರ.ಸಂ.೧೮೭.೨೪, ಕ್ರ.ಸಂ.೧೮೭.೨೬, ಕ್ರ.ಸಂ.೧೮೭.೨೭, ಮತ್ತು ಕ್ರ.ಸಂ.೧೮೭.೨೮ರ ವಿಷಯಗಳಿಗೆ ತಾಂತ್ರಿಕ ಕಾರಣಗಳಿಂದ ತಡವಾಗಿರುವ ಅನುಪಾಲನೆಯನ್ನು ಮುಂದಿನ ಸಭೆಗೆ ಮಂಡಿಸಲು ಸಭೆಯು ಅನುಮತಿ ನೀಡಿ ಮಂಡಿಸಲಾದ ನಡೆವಳಿಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅನುಮೋದಿಸಲಾಯಿತು.

**೧೮೮.೦೧. ದಿನಾಂಕ ೧೫.೦೬.೨೦೧೭ರಂದು ನಡೆದ ೨೦೧೬-೧೭ನೇ ಸಾಲಿನ ೪ನೇ ತ್ರೈಮಾಸಿಕ ಅವಧಿಯ ಹಣಕಾಸು ಸಮಿತಿ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ಕೋರಿದೆ.**

ನಿರ್ಣಯ: ದಿನಾಂಕ: ೧೫.೦೬.೨೦೧೭ರಂದು ನಡೆದ ೨೦೧೬-೧೭ನೇ ಸಾಲಿನ ೩ನೇ ತ್ರೈಮಾಸಿಕ ಅವಧಿಯ ಹಣಕಾಸು ಸಮಿತಿ ಸಭೆಯ ನಡೆವಳಿಗಳಿಗೆ ಅನುಮೋದನೆ ನೀಡಲಾಯಿತು.

**೧೮೮.೦೨. ೩.೭೧ (ಜೆ) ಅನ್ವಯ ಕನ್ನಡ ವಿಶ್ವವಿದ್ಯಾಲಯದ ಖಾಲಿ ಇರುವ ಹುದ್ದೆಗಳ ಭರ್ತಿ ಬಗೆಗೆ.**

ನಿರ್ಣಯ: ಕನ್ನಡ ವಿಶ್ವವಿದ್ಯಾಲಯದ ಖಾಲಿ ಇರುವ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಪರಿಶೀಲಿಸಿದ ಸಭೆಯು ೩.೭೧ (ಜೆ) ಮೀಸಲಾತಿ ಅನ್ವಯ ಸಿದ್ಧಪಡಿಸಲಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ಅನುಮತಿ ಪಡೆದು, ಉನ್ನತ ಶಿಕ್ಷಣ ಇಲಾಖೆ ನಿಯಮಾವಳಿಗಳಂತೆ (ಸುತ್ತೋಲೆ ಸಂಖ್ಯೆ:ಇಡಿ ೧೩೬ ಯುಎನ್ ಇ ೨೦೧೭ ದಿನಾಂಕ ೧೭.೦೭.೨೦೧೭) ಬೋಧಕ/ಬೋಧಕೇತರ ಹುದ್ದೆಗಳ ನೇಮಕಾತಿಗೆ ಕ್ರಮವಹಿಸಲು ಸಭೆಯು ಅನುಮೋದನೆ ನೀಡಿತು.

ಮಂಜೂರಾಗಿರುವ ಬೋಧಕ ಹುದ್ದೆಗಳನ್ನು ವಿಭಾಗವಾರು ನಿಗದಿಪಡಿಸುವ ಮತ್ತು ಅಗತ್ಯಕ್ಕೆ ಅನುಗುಣವಾಗಿ ಸಹಾಯಕ ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕ, ಪ್ರಾಧ್ಯಾಪಕ ಹುದ್ದೆಗಳನ್ನು ಪರಿವರ್ತಿಸಿ ಕ್ರಮವಹಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

೧೮೮.೦೩. ಕನ್ನಡ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಪ್ರಾರಂಭಿಸಲಾಗುತ್ತಿರುವ ಶೈಕ್ಷಣಿಕ ರೆಗ್ಯುಲರ್ ಹಾಗೂ ದೂರಶಿಕ್ಷಣ ಕೋರ್ಸ್‌ಗಳಿಗೆ ಅನುಮೋದನೆ ಕುರಿತು.

ನಿರ್ಣಯ: ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಸಿದ್ಧಪಡಿಸಲಾದ ಅನುಶಾಸನಗಳನ್ನು ಸಭೆಯು ಪರಿಶೀಲಿಸಿ ಯಾವ ಕೋರ್ಸ್ ಯಾವ ವಿಭಾಗ ನಡೆಸಬೇಕೆನ್ನುವುದನ್ನು ಸಾಂದರ್ಭಿಕವಾಗಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳುವ ಅಧಿಕಾರವನ್ನು ಕುಲಪತಿಗಳಿಗೆ ನೀಡಿ ಈ ವಿಷಯವನ್ನು ಮಂಡಿಸಲಾದ ಅನುಶಾಸನಗಳಲ್ಲಿ ತಿದ್ದುಪಡಿಮಾಡಿ ಅಡಕಗೊಳಿಸಲು ಸೂಚಿಸಿ ೨೦೧೭-೧೮ನೇ ಸಾಲಿನಲ್ಲಿ ಈ ಕೆಳಗಿನ ಕೋರ್ಸ್‌ಗಳನ್ನು ನಡೆಸಲು ಮತ್ತು ಅನುಶಾಸನ ರಚನೆಯಾಗದಿರುವ ಕೋರ್ಸ್‌ಗಳಿಗೆ ಅನುಶಾಸನಗಳನ್ನು ರಚಿಸಿ ಕ್ರಮವಹಿಸಲು ಅನುಮೋದನೆ ನೀಡಿತು.

**೧. ದೂರಶಿಕ್ಷಣ ನಿರ್ದೇಶನಾಲಯದ ಕೋರ್ಸ್‌ಗಳು**

೧. ರಾಜ್ಯಶಾಸ್ತ್ರ
೨. ಅರ್ಥಶಾಸ್ತ್ರ
೩. ಇಂಗ್ಲೀಷ್
೪. ಗ್ರಾಮೀಣಾಭಿವೃದ್ಧಿ
೫. ಪುರಾತತ್ವ ಮತ್ತು ಪ್ರವಾಸೋದ್ಯಮದ ಸ್ನಾತಕೋತ್ತರ

**೨. ಅಧ್ಯಯನಾಂಗದ ಕೋರ್ಸ್‌ಗಳು**

೧. ಎಂ.ಎ., ಪಿಎಚ್.ಡಿ (ಇತಿಹಾಸ ಮತ್ತು ಪುರಾತತ್ವ) ಸಂಯೋಜಿತ ಪದವಿ ಅನುಶಾಸನ
೨. ಎಂ.ಎ., ಪಿಎಚ್.ಡಿ (ಸಮಾಜಶಾಸ್ತ್ರ) ಸಂಯೋಜಿತ ಪದವಿ ಅನುಶಾಸನ
೩. ಎಂ.ಎ., ಪಿಎಚ್.ಡಿ (ಗ್ರಾಮೀಣಾಭಿವೃದ್ಧಿ) ಸಂಯೋಜಿತ ಪದವಿ ಅನುಶಾಸನ
೪. ಎಂ.ಎ., ಪಿಎಚ್.ಡಿ (ಕನ್ನಡ ಮತ್ತು ಜಾನಪದ) ಸಂಯೋಜಿತ ಪದವಿ ಅನುಶಾಸನ
೫. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಸ್ನಾತಕೋತ್ತರ ಪದವಿ ಅನುಶಾಸನ
೬. ಕನ್ನಡ ಭಾಷಾಧ್ಯಯನ ಸ್ನಾತಕೋತ್ತರ ಡಿಪ್ಲೊಮಾ ಪದವಿ ಅನುಶಾಸನ
೭. ದ್ರಾವಿಡ ಭಾಷಾವಿಜ್ಞಾನ ಸ್ನಾತಕೋತ್ತರ ಡಿಪ್ಲೊಮಾ ಪದವಿ ಅನುಶಾಸನ
೮. ಹಸ್ತಪ್ರತಿ ಸ್ನಾತಕೋತ್ತರ ಡಿಪ್ಲೊಮಾ ಪದವಿ ಅನುಶಾಸನ
೯. ಭಾಷಾಂತರ ಸ್ನಾತಕೋತ್ತರ ಡಿಪ್ಲೊಮಾ ಪದವಿ ಅನುಶಾಸನ
೧೦. ಜಾನಪದ ಸ್ನಾತಕೋತ್ತರ ಡಿಪ್ಲೊಮಾ ಪದವಿ ಅನುಶಾಸನ
೧೧. ಮಾನವಶಾಸ್ತ್ರ ಸ್ನಾತಕೋತ್ತರ ಡಿಪ್ಲೊಮಾ ಪದವಿ ಅನುಶಾಸನ
೧೨. ಬುಡಕಟ್ಟು ಅಧ್ಯಯನ ಸ್ನಾತಕೋತ್ತರ ಡಿಪ್ಲೊಮಾ ಪದವಿ ಅನುಶಾಸನ
೧೩. ಪತ್ರಿಕೋದ್ಯಮ ಸ್ನಾತಕೋತ್ತರ ಡಿಪ್ಲೊಮಾ ಪದವಿ ಅನುಶಾಸನ
೧೪. ನಾಟಕ ಕಲೆ ಡಿಪ್ಲೊಮಾ ಪದವಿ ಅನುಶಾಸನ
೧೫. ಪಂಚಾಯತ್ ರಾಜ್ ಡಿಪ್ಲೊಮಾ ಪದವಿ ಅನುಶಾಸನ

೧೮೮.೦೪. **ಲ್ಯಾಬ್‌ಲ್ಯಾಂಡ್ ಬಯೋಟೆಕ್ ಪ್ರೈವೇಟ್ ಲಿಮಿಟೆಡ್, ಮೈಸೂರು ಇವರು ಹಸಿರು ಪ್ರವಾಸೋದ್ಯಮದ ಬಗ್ಗೆ ಕನ್ನಡ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದಕ್ಕೆ ಕೋರಿರುವ ಮನವಿ ಕುರಿತು.**

ನಿರ್ಣಯ: ಲ್ಯಾಬ್‌ಲ್ಯಾಂಡ್ ಬಯೋಟೆಕ್ ಪ್ರೈವೇಟ್ ಲಿಮಿಟೆಡ್, ಮೈಸೂರು ಇವರ ಮನವಿಯನ್ನು ಪರಿಶೀಲಿಸಿದ ಸಭೆಯು ವಿಶ್ವವಿದ್ಯಾಲಯಕ್ಕೆ ತೊಂದರೆಯಾಗದಂತೆ ಇದರ ಸಾಧಕ/ಬಾಧಕಗಳ ಕುರಿತು ಚರ್ಚಿಸಲು ಸಭೆಯು ಸೂಚಿಸಿತು. ಹಾಗೂ ಈ ತರಹದ ತೀರ್ಮಾನಗಳನ್ನು ಕೈಗೊಳ್ಳುವುದಾದಲ್ಲಿ ಕಾನೂನು ಸಲಹೆಗಳನ್ನು ಪಡೆದು ಕನ್ನಡ ವಿಶ್ವವಿದ್ಯಾಲಯದ ಆಶಯಗಳಿಗೆ ಪೂರಕವಾಗಿ, ಕನ್ನಡ ವಿಶ್ವವಿದ್ಯಾಲಯದ ಆಡಳಿತವೇ ಪ್ರಧಾನವಾಗಿರುವಂತೆ ಎಚ್ಚರವಹಿಸಬೇಕೆಂದು ಅಭಿಪ್ರಾಯಪಟ್ಟಿತು.

೧೮೮.೦೫. **ಹೊಸ ಶೈಕ್ಷಣಿಕ ಕೋರ್ಸ್‌ಗಳಿಗೆ ಸಂಬಂಧಿಸಿ ವಿದ್ಯಾರಣ್ಯ ಆವರಣ ಹಾಗೂ ವಿಸ್ತರಣಾ ಕೇಂದ್ರಗಳಿಗೆ ತಾತ್ಕಾಲಿಕ ಅಧ್ಯಾಪಕರ ಮತ್ತು ಸಿಬ್ಬಂದಿ ನೇಮಕಾತಿ ಕುರಿತು.**

ನಿರ್ಣಯ: ೧. ವಿದ್ಯಾರಣ್ಯ ಆವರಣ ಹಾಗೂ ವಿಸ್ತರಣಾ ಕೇಂದ್ರಗಳಲ್ಲಿ ಪ್ರಾರಂಭಿಸುವ ಹೊಸ ಶೈಕ್ಷಣಿಕ ಕೋರ್ಸ್‌ಗಳಿಗೆ ಹಾಗೂ ಹಾಲಿ ಇರುವ ಕೋರ್ಸ್‌ಗಳ ತಾತ್ಕಾಲಿಕ ನೇಮಕಾತಿಗಳಿಗೆ ಸಂಬಂಧಿಸಿ ಸೂಕ್ತವೆನಿಸುವ ಸಾಂದರ್ಭಿಕ ನಿರ್ಣಯಗಳನ್ನು ಕೈಗೊಳ್ಳಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

೨. ರಾಯಚೂರು ಜಿಲ್ಲೆ ದೇವದುರ್ಗದಲ್ಲಿ ಸ್ಥಳೀಯ ಆಡಳಿತ ನೆರವಿನೊಂದಿಗೆ ವಿಸ್ತರಣಾ ಕೇಂದ್ರವನ್ನು ತೆರೆಯಲು ಮತ್ತು ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಯಾವುದೇ ಕೋರ್ಸ್‌ನ ಅಗತ್ಯವನ್ನು ಪರಿಶೀಲಿಸಿ ಪ್ರಾರಂಭಿಸಲು ಅನುಮೋದನೆ ನೀಡಿತು.

೧೮೮.೦೬. **ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕುರಿತು.**

ನಿರ್ಣಯ: ವಿಶ್ವವಿದ್ಯಾಲಯವು ಸಿದ್ಧಪಡಿಸಿರುವ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಭೆಯು ಅನುಮೋದನೆ ನೀಡಿತು.

೧೮೮.೦೭. **ಹುದ್ದೆಗಳ ಮೇಲ್ದರ್ಜೆಗೇರಿಸುವಿಕೆ ಪ್ರಸ್ತಾವಕ್ಕೆ ಕಾರ್ಯಕಾರಿ ಅನುಮೋದನೆ ಕುರಿತು.**

ನಿರ್ಣಯ: ಹುದ್ದೆಗಳ ಮೇಲ್ದರ್ಜೆಗೇರಿಸುವಿಕೆ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಭೆಯು ಕನಿಷ್ಟ ಎರಡು ವರ್ಷಗಳ ಸೇವಾವಧಿ ಇರುವ ಸಿಬ್ಬಂದಿಗಳಿಗೆ ಮೇಲ್ದರ್ಜೆಗೇರಿಸಲು ಅನುಮೋದನೆ ನೀಡಿತು. ಈಗಾಗಲೇ ಮುಂದಿನ ಹುದ್ದೆಯ ವೇತನ ಶ್ರೇಣಿಯನ್ನು ದಾಟಿರುವವರಿಗೆ ಮತ್ತು ೧೫ವರ್ಷಗಳ ಸೇವಾವಧಿಯನ್ನು ಒಂದೇ ಹುದ್ದೆಯಲ್ಲಿ ಮುಂದುವರಿಸಿದ್ದರೆ ಅಂತಹವರಿಗೆ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯಾಗದಂತೆ ಕ್ರಮವಹಿಸಲು ಸಭೆ ಅನುಮತಿ ನೀಡಿತು.

ಮೇಲ್ದರ್ಜೆಗೇರಿಸಿದ ಹುದ್ದೆಗಳಿಗೆ ಹುದ್ದೆಯನ್ನು ನೀಡಿದ ಎರಡು ವರ್ಷಗಳ ಒಳಗೆ ಸರ್ಕಾರದ ಅನುಮೋದನೆಯನ್ನು ಪಡೆಯಲು ಸೂಚಿಸಿತು. ಒಂದು ವೇಳೆ ಅನುಮೋದನೆ ದೊರೆಯದಿದ್ದಲ್ಲಿ ಈ ಹಿಂದಿನ ಹುದ್ದೆಗೆ ಮರಳಿಸಲು ಸೂಚಿಸಿತು.

ಒಂದು ವರ್ಷದ ವೇತನ ಬಡ್ತಿಯನ್ನು ನೀಡಿಯೂ ಮುಂದಿನ ಹುದ್ದೆಯ ವೇತನ ಶ್ರೇಣಿಯನ್ನು ತಲುಪದ ನೌಕರರಿಗೆ ವೇತನ ಶ್ರೇಣಿಯನ್ನು ತಲುಪಿದ ನಂತರ ಕಾರ್ಯಕಾರಿ ಸಮಿತಿ ಅನುಮೋದನೆ ಪಡೆದು ನಿಯಮಾನುಸಾರ ಕ್ರಮವಹಿಸಲು ಸಭೆ ಸೂಚಿಸಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ**

೧೮೮.೦೮. **ಭಾಷಾಂತರ ಕೇಂದ್ರಕ್ಕೆ ಅನುವಾದ ವಿದ್ವಾಂಸರನ್ನು ಮತ್ತು ಪತ್ರಿಕೋದ್ಯಮ ವಿಭಾಗಕ್ಕೆ ಅಧ್ಯಯನಾಂಗದಿಂದ ಕೋರಿರುವ ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಲು ಮತ್ತು ಸಂಭಾವನೆ ನಿಗದಿಗೊಳಿಸುವ ಕುರಿತು.**

ನಿರ್ಣಯ: ಭಾಷಾಂತರ ಕೇಂದ್ರಕ್ಕೆ ಹಿಂದಿ ಮತ್ತು ಇಂಗ್ಲೀಷ್ ವಿಷಯಕ್ಕೆ ಸಂಬಂಧಿಸಿ ಭಾಷಾಂತರ ಕೇಂದ್ರದಿಂದ ವಿದ್ವಾಂಸರ ಪಟ್ಟಿಯನ್ನು ಪಡೆದು ನಿಯೋಜಿಸಲು ಮತ್ತು ಪತ್ರಿಕೋದ್ಯಮ ವಿಭಾಗಕ್ಕೆ ತಾತ್ಕಾಲಿಕವಾಗಿ ಸಂಪನ್ಮೂಲ ವ್ಯಕ್ತಿಗಳಾಗಿ ಸೂಕ್ತವೆನಿಸುವ ವಿದ್ವಾಂಸರನ್ನು ಆಯ್ಕೆಮಾಡಿಕೊಳ್ಳಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

ಈ ನಿಯೋಜನೆಗಳಿಗೆ ಮಾಸಿಕ ರೂ.೨೫,೦೦೦/-ಗಳ ಗೌರವ ಸಂಭಾವನೆ ನಿಗಧಿಗೊಳಿಸಲು ಮತ್ತು ಮೊದಲು ಆರು ತಿಂಗಳಿಗೆ ಅಗತ್ಯವೆನಿಸಿದಲ್ಲಿ ಮುಂದುವರಿಕೆಗೆ ಅನುವಾಗುವಂತೆ ಕ್ರಮಕೈಗೊಳ್ಳಲು ಸಭೆಯು ಅನುಮತಿ ನೀಡಿತು.

೧೮೮.೦೯. **ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಕೆ.ಆರ್.ಐ.ಡಿ.ಎಲ್. (ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮ) ಸಂಸ್ಥೆಯು ನಿರ್ವಹಿಸುತ್ತಿರುವ ಕಾಮಗಾರಿಗಳಿಗೆ ಅವಧಿ ವಿಸ್ತರಣೆ ಕೋರಿ ತಾಂತ್ರಿಕ ವಿಭಾಗದ ಮುಖ್ಯಸ್ಥರ ಪತ್ರದ ಹಿನ್ನೆಲೆಯಲ್ಲಿ ನಿರ್ದೇಶನ ಕೋರಿದೆ.**

ನಿರ್ಣಯ: ಕೆ.ಆರ್.ಐ.ಡಿ.ಎಲ್. ಸಂಸ್ಥೆಯು ನಿರ್ಮಾಣ ಮಾಡುತ್ತಿರುವ ಕಟ್ಟಡ ಕಾಮಗಾರಿಗಳ ನಿರ್ಮಾಣದ ಅವಧಿಯ ವಿಸ್ತರಣೆ ಮನವಿಯನ್ನು ಸಭೆಯು ಪರಿಶೀಲಿಸಿ ಕರಾರಿನಲ್ಲಿ ನಿಗದಿಗೊಳಿಸಿದ ನಿರ್ಮಾಣವೆಚ್ಚ ಹೆಚ್ಚಾಗದಂತೆ, ತಾಂತ್ರಿಕ ವಿಭಾಗದ ಮುಖ್ಯಸ್ಥರ ಶಿಫಾರಸ್ಸನ್ನು ಪರಿಶೀಲಿಸಿ ವಿಸ್ತರಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

೧೮೮.೧೦. **ಬೆಳ್ಳಿಹಬ್ಬದ ಕಾರ್ಯಕ್ರಮಗಳ ನಿರ್ವಹಣೆಗೆ ಸಂಬಂಧಿಸಿ ಪುಸ್ತಕ ಪ್ರಕಟಣೆ ಇತರೆ ನಿರ್ವಹಣೆ ಮತ್ತು ಸರಬರಾಜು ಕೆಲಸಗಳನ್ನು MC & A (Marketing Communication & Advertising Limited) ಗೆ ನೀಡಲು ಅನುಮತಿ ಕುರಿತು.**

ನಿರ್ಣಯ: ಕನ್ನಡ ವಿಶ್ವವಿದ್ಯಾಲಯದ ೨೫ನೇ ವರ್ಷದ ಬೆಳ್ಳಿಹಬ್ಬದ ನಿಮಿತ್ತ ಪುಸ್ತಕ ಪ್ರಕಟಣೆಗಳ ಮುದ್ರಣವನ್ನು ಹಾಗೂ ಇತರೆ ನಿರ್ವಹಣೆ ಮತ್ತು ಸರಬರಾಜು ಕೆಲಸಗಳನ್ನು ರೂ.೧,೦೦,೦೦,೦೦೦/- (ಒಂದು ಕೋಟಿ ರೂ)ಗಳಿಗೆ ಮೀರದಂತೆ MC&A (Marketing Communication & Advertising Limited, Bangalore) ಸಂಸ್ಥೆಗೆ ನೀಡಲು ಸಭೆಯು ಅನುಮೋದನೆ ನೀಡಿತು.

೧೮೮.೧೧. **ಶ್ರೀ ವೆಂಕಪ್ಪ ಮತ್ತು ಪ್ರಸಾರಾಂಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಗಂಗಾಧರ ಇವರ ಅನಧಿಕೃತ ಗೈರು ಹಾಜರಿಯ ಪ್ರಕರಣದ ಕುರಿತು ದಿನಾಂಕ ೨೫.೦೭.೨೦೧೭ರಂದು ನಡೆದ ವಿಚಾರಣಾ ಸಮಿತಿ ಸಭೆಯ ವರದಿಯ ಹಿನ್ನೆಲೆಯಲ್ಲಿ ಶಿಸ್ತುಕ್ರಮಕ್ಕೆ ನಿರ್ದೇಶನ ಕೋರಿ.**

ನಿರ್ಣಯ: ಈಗಾಲೆ ಹಲವು ಬಾರಿ ಎಚ್ಚರಿಕೆ ನೀಡಿದ್ದರೂ ತಿದ್ದಿಕೊಳ್ಳದ ಶ್ರೀ ವೆಂಕಪ್ಪ ಇವರಿಗೆ ಅವರ ಕೋರಿಕೆಯಂತೆ ಸ್ವಯಂನಿವೃತ್ತಿ/ ಕಡ್ಡಾಯನಿವೃತ್ತಿಗೊಳಿಸಲು ಅನುಮೋದನೆ ನೀಡಿತು. ಗಂಗಾಧರ ಅವರಿಗೆ ಎಚ್ಚರಿಕೆ ನೀಡಿ ತಿದ್ದಿಕೊಳ್ಳಲು ಒಂದು ಅವಕಾಶವನ್ನು ನೀಡಲು ಸಭೆಯು ಸೂಚಿಸಿತು.

೧೮೮.೧೨. **ವಿಶ್ವವಿದ್ಯಾಲಯದ ಸಿಬ್ಬಂದಿ ನೀಡಿರುವ ಪದೋನ್ನತಿ ಮನವಿ ಕುರಿತು.**

ನಿರ್ಣಯ: ೧. ಈಗಾಗಲೇ ಒಮ್ಮೆ ಹುದ್ದೆ ಮೇಲ್ದರ್ಜೆಗೇರಿಸಿರುವ ಇವರ ಮನವಿಗಳನ್ನು ಪರಿಶೀಲಿಸಿದ ಸಮಿತಿಯು ಶ್ರೀ ಜೆ.ಎಸ್. ನಂಜಯ್ಯನವರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಶ್ರೀ ಶ್ರೀನಿವಾಸುಲು, ಸಹಾಯಕ

ಅಭಿಯಂತರರು(ವಿದ್ಯುತ್), ಶ್ರೀ ಕೆ.ಎಂ.ಕುಬೇರಪ್ಪ, ಕಿರಿಯ ಅಭಿಯಂತರರು(ಸಿವಿಲ್) ಇವರುಗಳ ಮುಂಬಡ್ತಿ/ಮೇಲ್ದರ್ಜೆಗೇರಿಸುವ ಮನವಿ ಕುರಿತಂತೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುದಾರಣೆ ಇಲಾಖೆಗೆ ಪತ್ರವನ್ನು ಬರೆದು ನಿರ್ದೇಶನ ಪಡೆದು ಕ್ರಮವಹಿಸಲು ಸಭೆಯು ಸೂಚಿಸಿತು.

೨. ಶ್ರೀ ಕಾಶಿವಿಶ್ವನಾಥ, ಸಹಾಯಕ ನಿರ್ದೇಶಕರು, ಪ್ರಸಾರಾಂಗ ಇವರು ಜನವರಿ ೨೦೧೫ರಲ್ಲಿ ಮುಂಬಡ್ತಿ ಪಡೆದಿದ್ದು, ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳು, ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಹುದ್ದೆಗಳ ವಾಸ್ತವ ಸ್ಥಿತಿಯ ಅರಿವಿದ್ದೂ ನ್ಯಾಯಾಲದ ಮೊರೆ ಹೋಗುತ್ತೇನೆಂದು ಆಡಳಿತಾಂಗಕ್ಕೆ ಬೆದರಿಕೆ ಯೊಡ್ಡುವ ರೀತಿಯಲ್ಲಿ ಪತ್ರ ಬರೆದಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿ ಈ ಕುರಿತು ಎಚ್ಚರಿಕೆ ನೋಟೀಸ್ ನೀಡಲು ಸೂಚಿಸಿತು.

೩. ಶ್ರೀ ಶಿವಾನಂದ ಬಡಿಗೇರ ಇವರ ಮನವಿ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆ ಇಲ್ಲದೆ ಮೂರು ವರ್ಷಗಳ ಸೇವೆ ಮಾತ್ರ ಬಾಕಿಯಿರುವ ಇದುವರೆಗೂ ಪದೋನ್ನತಿ ಪಡೆಯದೆ ಕಾರ್ಯನಿರ್ವಹಿಸಿರುವ ಇವರ ಪದನಾಮವನ್ನು ನಿಯಮಾನುಸಾರ ಬದಲಾವಣೆ ಮಾಡಲು ಸಭೆಯು ಅನುಮೋದನೆ ನೀಡಿತು.

೧೮೮.೧೩. **ಶ್ರೀ ಈರಪ್ಪ ಮೆಟ್ಟಿ, ತೋಟಮಾಲಿ ಇವರು ಮೈಸೂರು ಮುಕ್ತ ವಿಶ್ವವಿದ್ಯಾಲಯದ ಎಸ್.ಎಸ್.ಎಲ್.ಸಿ. ಗೆ ಸಮಾನವೆಂದು ಸಲ್ಲಿಸಿರುವ ಬ್ರಿಡ್ಜ್‌ಕೋರ್ಸ್ ವಿದ್ಯಾರ್ಹತೆ ದಾಖಲಾತಿ ಕುರಿತು.**

ನಿರ್ಣಯ: ಶ್ರೀ ಈರಪ್ಪ ಮೆಟ್ಟಿ, ತೋಟಮಾಲಿ ಇವರು ಸಲ್ಲಿಸಿರುವ ಬ್ರಿಡ್ಜ್‌ಕೋರ್ಸ್ ವಿದ್ಯಾರ್ಹತೆ ದಾಖಲಾತಿಯನ್ನು ಸಭೆಯು ಪರಿಶೀಲಿಸಿ, ಇವರು ಪೂರೈಸಿರುವ ಬ್ರಿಡ್ಜ್‌ಕೋರ್ಸ್ ದಾಖಲಾತಿಗಳನ್ನು ಸಂಬಂಧಿಸಿದ ಸಂಸ್ಥೆಗಳಿಗೆ ಪರಿಶೀಲನೆಗಾಗಿ ಕಳುಹಿಸಿ ವರದಿ ಪಡೆದು ನಿಯಮಾನುಸಾರ ಕ್ರಮವಹಿಸಲು ಸಭೆಯು ಸೂಚಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು